ಒದಗಿಬಂತು. ಅಲ್ಲಿ ನಡೆದ ಚರ್ಚೆಗಳು ಮಹಿಳಾಪರವಾದ ಮತ್ತು ಮಹಿಳಾಸಾಹಿತ್ಯದ ವಿಚಾರಗಳಿಗೆ ಅನುಕೂಲವಾಗುವಂಥವು ಆಗಿದ್ದವು.

◆ ಈ ಹಂತದಲ್ಲಿ ಯಾವಾಗಲಾದರೂ ನಿಮ್ಮೊಳಗೊಂದು ಮಾನಸಿಕ ಘರ್ಷಣೆ ಆಗಿರಬಹುದಾ? ಅಲ್ಲಿ ನಡೆಯುವ ಚರ್ಚೆಗಳು ಮಹಿಳೆಯರು ಶೋಷಿತರು ಎಂಬಂಥ ಚೌಕಟ್ಟಿನಲ್ಲಿ ಇದ್ದಿರಬೇಕು. ಆದರೆ, ನಿಮಗೆ ಮನೆಯಲ್ಲಿ ಮಹಿಳೆಯರೇ ಹೆಚ್ಚು ಸಬಲರು ಎನ್ನುವ ವಾತಾವರಣ. ಇದು ಗಂಡು ಲೇಖಕರಿಗೆ ಆಗುತ್ತದೋ ಇಲ್ಲವೋ ಆದರೆ ಹೆಣ್ಣುಮಕ್ಕಳು ಬರೆಯಲು ಶುರು ಮಾಡಿದರೆ ಆ ಅನುಭವ ಅವರ ಜೀವನದ ಒಂದು ಭಾಗ ಇರಬೇಕು ಎಂದುಕೊಳ್ಳುವ ಅದೇ ಕುತೂಹಲದಿಂದ ಓದುವ ಸಾಕಷ್ಟು ಜನ ಓದುಗರೂ ಇರುತ್ತಾರೆ, ಅಲ್ಲವೇ? ಶೋಷಣೆಯ ಮಾತುಗಳನ್ನು ಕೇಳುವಾಗ ನಿಮ್ಮಲ್ಲಿ ತಾಕಲಾಟ ಆಗುತ್ತಿತ್ತೇ?

ಬದುಕು ಅನ್ನೋದು ಒಂದು ಗೆರೆಯಲ್ಲಿ ಹೋಗುವುದಿಲ್ಲ. ಸಿದ್ಧಾಂತಗಳನ್ನು ಸದಾಕಾಲ ಅನ್ವಯಿಸಿಕೊಳ್ಳುತ್ತಾ ಜೀವನ ಮಾಡಲಾಗುವುದಿಲ್ಲ. ನಿಮಗೆ ಎಲ್ಲಾ ಬಗೆಯ ಸ್ವಾತಂತ್ರ್ಯ ಸಿಕ್ಕಿ ಯಾವ ಬಗೆಯ ಶೋಷಣೆಯೂ ಇಲ್ಲ ಎಂದು ಹೇಳಲಾಗದು. ನಾವು ಅವಸರದ ಮೇಲ್ನೈ ಪ್ರತಿಪಾದನೆಯನ್ನು ಸ್ವಲ್ಪ ಬದಿಗಿರಿಸಿ ಪುರುಷಪ್ರಧಾನ ಮೌಲ್ಯಗಳು ಸೂಕ್ಷ್ಮಾತಿಸೂಕ್ಷ್ಮ ನೆಲೆಗಳಲ್ಲಿ ಅಂತೆಯೇ ಅತ್ಯಂತ ದಟ್ಟ ನೆಲೆಗಳಲ್ಲಿ ಕೂಡ ನಮ್ಮ ಬದುಕನ್ನು ಆವರಿಸಿಕೊಳ್ಳುತ್ತವೆ ಎನ್ನುವುದನ್ನು ಗಮನಿಸಬೇಕು.

ಗಂಗೋತ್ರಿಯಲ್ಲಿ ಬೇಕಾದಷ್ಟು ಸೆಮಿನಾರುಗಳು ಆಗುತ್ತಿದ್ದವು. ಅದರಲ್ಲಿ ಸಾಕಷ್ಟು ಜನ ಭಾಷಣಕಾರರು ಇರುತ್ತಿದ್ದರು. ಅಲ್ಲಿ ಮಹಿಳಾಪರವಾದ ವಿಚಾರಗಳನ್ನು ಮಂಡಿಸಲು ಒಬ್ಬ ಮಹಿಳಾ ಭಾಷಣಕಾರ್ತಿ ಭಾಗವಹಿಸುತ್ತಿದ್ದರು ಅಂತಿಟ್ಟುಕೊಳ್ಳಿ. ಬೇರೆ ಭಾಷಣಕಾರರ ಮಾತುಗಳನ್ನು ತಾಳ್ಮೆಯಿಂದ ಆಲಿಸಿದ ಕೇಳುಗರು ಸದರಿ ಭಾಷಣಕಾರ್ತಿ ಮಾತನಾಡಲು ಪ್ರಾರಂಭಿಸುವ ಹೊತ್ತಿಗೆ ಒಬ್ಬೊಬ್ಬರಾಗಿ ಎದ್ದು ಹೋಗುತ್ತಿದ್ದರು. ಅರ್ಧಕ್ಕೂ ಹೆಚ್ಚು ಆಡಿಟೋರಿಯಂ ಈ ರೀತಿಯಾಗಿ ಖಾಲಿಯಾಗುತ್ತಿತ್ತು. ಈ ಸೂಕ್ಷ್ಮ ನಮಗೆ ಅರ್ಥವಾಗಬೇಕು. ಬರೀ ಮಾತುಗಳನ್ನು ಕೇಳಿಸಿಕೊಳ್ಳುವಷ್ಟು ಸಹನೆ ಕೂಡ ಇಲ್ಲ ಎಂಬುವ ಸರಳ ಸತ್ಯದ ದರ್ಶನ ಆಗಬೇಕು. ಮಹಿಳೆಯರು ಮಾತನಾಡುವ ಸಮಯ ನಿಮಗೆ ಕಾಫಿ ಕುಡಿಯುವ ಬ್ರೇಕ್ ಅಥವಾ ಇನ್ನೇನೋ ಕೆಲಸ ಪೂರೈಸುವ ಬ್ರೇಕ್ ಹೇಗೆ ಆಗುತ್ತದೆ?



◆ ನೀವು ಹೇಳುತ್ತಿರುವುದು ತುಂಬಾ ಆಸಕ್ತಿಕರವಾಗಿದೆ. ಇದೆಲ್ಲವೂ ಒಂದು ನೆಟ್‌ವರ್ಕ್ ಅನಿಸುತ್ತದಾ ನಿಮಗೆ? ಅಕಡೆಮಿಕ್ ವಲಯ, ಸಾಹಿತ್ಯಿಕ ವಲಯ ಎಲ್ಲವೂ ಒಂದು ನೆಟ್‌ವರ್ಕ್ ಇರಬಹುದೇ?